# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **328** |
| ಸದಸ್ಯರ ಹೆಸರು | : | ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10-12-2025 |

| | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ಖಾಸಗಿ ಮತ್ತು ಸರ್ಕಾರಿ ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ಸುರಕ್ಷತಾ ವ್ಯವಸ್ಥೆಗಳ ಬಗ್ಗೆ ನಿರ್ಲಕ್ಷ್ಯ ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ಖಾಸಗಿ ಮತ್ತು ಸರ್ಕಾರಿ ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ಸುರಕ್ಷತಾ ವ್ಯವಸ್ಥೆಗಳ ಬಗ್ಗೆ ಕಟ್ಟು ನಿಟ್ಟಿನ ಕ್ರಮ ವಹಿಸಲಾಗುತ್ತಿದ್ದು, ಸದರಿ ವಿಷಯದಲ್ಲಿ ಯಾವುದೇ ನಿರ್ಲಕ್ಷ್ಯತೆ ವಹಿಸಿರುವುದು ಕಂಡುಬಂದಿರುವುದಿಲ್ಲ.<br><br>ಅಕ್ಟೋಬರ್ 2013 ರಂದು ಬೆಳಿಗ್ಗೆ 5:30 ಗಂಟೆ ಸುಮಾರಿಗೆ ಬೆಂಗಳೂರು – ಹೈದ್ರಾಬಾದ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಜಬ್ಬಾರ್ ಟ್ರಾವೆಲ್ಸ್ ಸಂಸ್ಥೆಯ ಬಸ್ (ವೋಲ್ವೋ ಸ್ಲೀಪರ್) ಭೀಕರ ಅಪಘಾತದಲ್ಲಿ ಸುಮಾರು 4 ಜನರ ಪ್ರಾಣಹಾನಿ ಸಂಭವಿಸಿದ್ದನ್ನು ಸಾರಿಗೆ ಇಲಾಖೆಯು ಅತ್ಯಂತ ಗಂಭೀರವಾಗಿ ಪರಿಗಣಿಸಿ, ನಂತರದ ದಿನಗಳಲ್ಲಿ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿ ಪ್ರಯಾಣಿಕರ ವಾಹನಗಳಲ್ಲಿ |
| ಆ. | ಬಂದಿದ್ದಲ್ಲಿ, ಸರ್ಕಾರ ಈವರೆವಿಗೂ ತೆಗೆದುಕೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು) | ಸುರಕ್ಷತಾ ಕ್ರಮಗಳನ್ನು ಕೈಗೊಂಡಿದ್ದು ಸದರಿ ಸುರಕ್ಷತಾ ಕ್ರಮಗಳು ದೇಶದಲ್ಲಿಯೇ ಮಾದರಿಯಾಗಿರುತ್ತದೆ. ಅವುಗಳು ಕೆಳಕಂಡಂತಿವೆ:<br><br>1. ಸಾರ್ವಜನಿಕ ಪ್ರಯಾಣಿಕರು ಸಂಚರಿಸುವ ಬಸ್ಸುಗಳಲ್ಲಿ ತುರ್ತು ಸಂದರ್ಭಗಳಲ್ಲಿ ಪ್ರಯಾಣಿಕರು ಸುರಕ್ಷಿತವಾಗಿ ವಾಹನದಿಂದ ಹೊರಬರಲು ವಾಹನಗಳಲ್ಲಿ ಕೇಂದ್ರ ಮೋಟಾರು ವಾಹನ ನಿಯಮಾವಳಿ 1989 ರ ನಿಯಮ 128(4) ರಲ್ಲಿ ತಿಳಿಸಿರುವಂತೆ ತುರ್ತು ನಿರ್ಗಮನ ದ್ವಾರ (Emergency Exit Door) ಗಳ ಅಳವಡಿಕೆ ಕಡ್ಡಾಯಗೊಳಿಸಿ ಅನುಷ್ಠಾನಗೊಳಿಸಲಾಗಿದೆ.<br>2. ಸಾರ್ವಜನಿಕ ಪ್ರಯಾಣಿಕರು ಸಂಚರಿಸುವ ಬಸ್ಸುಗಳಲ್ಲಿ Fire Extinguisher ಹಾಗೂ First Aid Box ಗಳನ್ನು ವಾಹನಗಳಲ್ಲಿ ಅಳವಡಿಸಲು ಕ್ರಮ ಕೈಗೊಳ್ಳುವಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.<br>3. ಅನುಮೋದಿತ ವೇಗ ನಿಯಂತ್ರಕಗಳನ್ನು ಅಳವಡಿಸಿರುವುದನ್ನು ಪರಿಶೀಲಿಸಿ ದೃಢೀಕರಿಸಿ ಕೊಳ್ಳುವುದು.<br>4. ಪ್ರಯಾಣಿಕರ ವಾಹನಗಳಲ್ಲಿ ಯಾವುದೇ ವಾಣಿಜ್ಯ ಸರಕು / ಲಗೇಜ್ ಸಾಗಿಸುವ ಸಂದರ್ಭಗಳಲ್ಲಿ ಬೆಂಕಿ ಸ್ಪರ್ಷಕ್ಕೆ ಸರಳವಾಗಿ ಉರಿಯುವ ಇತರ ಸ್ಫೋಟಕ ವಸ್ತುಗಳನ್ನು ಸಾಗಿಸದಂತೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ.<br><br>ಮುಂದುವರೆದು, ಮೇಲೆ ತಿಳಿಸಿರುವ ಸುರಕ್ಷತಾ ಕ್ರಮಗಳನ್ನು ವಾಹನ ಚಾಲಕರು / ಮಾಲೀಕರುಗಳು ಪಾಲಿಸುತ್ತಿರುವ ಕುರಿತು ವಾಹನಗಳ ಅರ್ಹತಾ ಪತ್ರ ನವೀಕರಣ ಸಮಯದಲ್ಲಿ ಹಾಗೂ ಪ್ರವರ್ತನ ಸಮಯದಲ್ಲಿ ಖಚಿತ ಪಡಿಸಿಕೊಳ್ಳಲು ರಾಜ್ಯದ ಎಲ್ಲಾ ಸಾರಿಗೆ ಕಛೇರಿಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. ರಾಜ್ಯದಲ್ಲಿ 2013ರ ಅಪಘಾತದ ನಂತರ ಇಂತಹ ಯಾವುದೇ ಭೀಕರ ಅಪಘಾತಗಳು ಜರುಗಿರುವುದಿಲ್ಲ. |

--2

| | ಪ್ರಶ್ನೆ | ಉತ್ತರ |
|---|---|---|
| | | ಇದಲ್ಲದೆ ಸಾರ್ವಜನಿಕರು ಸಂಚರಿಸುವ ಬಸ್ಸುಗಳಲ್ಲಿ ಪ್ರಯಾಣಿಕರ ಸುರಕ್ಷತೆ ಕುರಿತು ಕಾಲಕಾಲಕ್ಕೆ ವಿಶೇಷ ಪ್ರವರ್ತನ ತಂಡಗಳನ್ನು ರಚಿಸಿ ಪ್ರವರ್ತನ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>2024-25 ನೇ ಸಾಲಿನಲ್ಲಿ ಪ್ರವರ್ತನ ಸಮಯದಲ್ಲಿ ಸುರಕ್ಷತಾ ಕ್ರಮಗಳನ್ನು ಪಾಲಿಸದಿರುವ ಖಾಸಗಿ ಬಸ್ಸುಗಳ ವಿರುದ್ಧ ಮತ್ತು ಇತರ ಸಾರಿಗೆ ವಾಹನಗಳ ವಿರುದ್ಧ ಒಟ್ಟು 1317 ಪ್ರಕರಣಗಳನ್ನು ದಾಖಲಿಸಿ, ರೂ.53,98,382/- ಗಳ ದಂಡವನ್ನು ಸಂಗ್ರಹಿಸಲಾಗಿರುತ್ತದೆ.<br><br>ಮುಂದುವರೆದು, ಸಾರಿಗೆ ಇಲಾಖೆಯ ಅಧೀನ ಸಾರಿಗೆ ಸಂಸ್ಥೆಗಳ ವಾಹನಗಳಲ್ಲಿ ಸುರಕ್ಷತಾ ವ್ಯವಸ್ಥೆಗಾಗಿ FDAS, FDSS, Fire extinguisher, ಪ್ರಥಮ ಚಿಕಿತ್ಸೆ ಪೆಟ್ಟಿಗೆ ಹಾಗೂ ಜಿ.ಪಿ.ಎಸ್.ಗಳನ್ನು ಅಳವಡಿಸಲಾಗಿದ್ದು, ಕ.ರಾ.ರ.ಸಾ.ನಿಗಮದ ಒಟ್ಟು 1723 ಬಸ್ಸುಗಳಲ್ಲಿ VLTD & Panic button ಗಳನ್ನು ಅಳವಡಿಸಲಾಗಿರುತ್ತದೆ ಹಾಗೂ ಸುರಕ್ಷತಾ ವ್ಯವಸ್ಥೆಗಾಗಿ 1148 ಬಸ್ಸುಗಳಲ್ಲಿ Rear view Camera ಗಳನ್ನು ಅಳವಡಿಸಲಾಗಿದೆ. ಬೆಂ.ಮ.ಸಾ.ಸಂಸ್ಥೆ ಬಸ್ಸುಗಳಲ್ಲಿ ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ ಡಿವೈಸ್ ಹಾಗೂ ಎಮರ್ಜೆನ್ಸಿ ಪ್ಯಾನಿಕ್ ಬಟನ್ ಅನ್ನು ಅಳವಡಿಸಲಾಗಿರುತ್ತದೆ. ವಾ.ಕ.ರ.ಸಾ.ಸಂಸ್ಥೆಯ 1097 ಬಸ್ಸುಗಳಲ್ಲಿ ವೆಹಿಕಲ್ ಲೋಕೆಶನ್ ಟ್ರಾಕಿಂಗ್ ಡಿವೈಸ್ ಹಾಗೂ ಎಮರ್ಜೆನ್ಸಿ ಬಟನ್ ಅಳವಡಿಸಲಾಗಿರುತ್ತದೆ ಹಾಗೂ 867 ಹೊಸ ಬಸ್ಸುಗಳಲ್ಲಿ ಸಿಸಿ ಕ್ಯಾಮರಾ ಮತ್ತು Fire Detection Alarm System ಗಳನ್ನು ಅಳವಡಿಸಲಾಗಿರುತ್ತದೆ. ಕ.ಕ.ರ.ಸಾ.ನಿಗಮದ 1041 ಬಸ್ಸುಗಳಿಗೆ ವೆಹಿಕಲ್ ಲೋಕೆಶನ್ ಟ್ರಾಕಿಂಗ್ ಡಿವೈಸ್ ಹಾಗೂ ಎಮರ್ಜನ್ಸಿ ಬಟನ್ ಅಳವಡಿಸಲಾಗಿದ್ದು, ಈ ಪೈಕಿ 215 ಬಸ್ಸುಗಳನ್ನು ಸರ್ಕಾರದ SURAKSHA MITRAಕ್ಕೆ ಇಂಟಿಗ್ರೇಶನ್ ಮಾಡಲಾಗಿರುತ್ತದೆ. ಬಾಕಿ ಬಸ್ಸುಗಳ ಇಂಟಿಗ್ರೇಶನ್ ಪ್ರಕ್ರಿಯೆಯೂ ಸಹ ಜಾರಿಯಲ್ಲಿರುತ್ತದೆ.<br><br>ತುರ್ತು ಸಂದರ್ಭದಲ್ಲಿ ಅನುವಾಗಲು, ಪ್ರತಿ ವಾಹನಗಳಲ್ಲಿ Emergency Exit & ಗಾಜುಗಳನ್ನು ಒಡೆಯಲು Hammer ಗಳ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗಿದೆ.<br><br>ಕಾಲ ಕಾಲಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಜಾರಿ ಮಾಡುವ ಮಾರ್ಗಸೂಚಿಗಳನ್ವಯ ಸುರಕ್ಷತಾ ಕ್ರಮಗಳನ್ನು ಪಾಲನೆ ಮಾಡಲಾಗುತ್ತಿದೆ. |
| ಇ. | ಖಾಸಗಿ ಮತ್ತು ಸರ್ಕಾರಿ ಬಸ್ಸುಗಳಲ್ಲಿ ಸರಕು ಸಾಗಾಣಿಕೆ / ಅತಿಯಾದ ಲಗೇಜ್ / ಸ್ಫೋಟಕ ವಸ್ತುಗಳನ್ನು ಸಾಗಿಸುತ್ತಿರುವುದರಿಂದ ಬಸ್ಸುಗಳಲ್ಲಿ ಆಕಸ್ಮಿಕವಾಗಿ ಉಂಟಾಗುವ ಬೆಂಕಿ ಜ್ವಾಲೆಯು ಲಗೇಜ್ ಗಳಿಗೆ ಹೊತ್ತಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಖಾಸಗಿ ಮತ್ತು ಸರ್ಕಾರಿ ಬಸ್ಸುಗಳಲ್ಲಿ ಸರಕು ಸಾಗಾಣಿಕೆ/ಅತಿಯಾದ ಲಗೇಜ್/ಸ್ಫೋಟಕ ವಸ್ತುಗಳನ್ನು ಸಾಗಿಸುತ್ತಿರುವುದರಿಂದ ಬಸ್ಸುಗಳಲ್ಲಿ ಆಕಸ್ಮಿಕವಾಗಿ ಉಂಟಾಗುವ ಬೆಂಕಿ ಜ್ವಾಲೆಯು ಲಗೇಜ್ ಗಳಿಗೆ ಹೊತ್ತಿಕೊಂಡಿರುವುದು 2013ರ ಜಬ್ಬಾರ್ ಟ್ರಾವೆಲ್ಸ್ ಸಂಸ್ಥೆಯ ಬಸ್ (ವೋಲ್ವೋ ಸ್ಲೀಪರ್) ಅಪಘಾತದ ಪ್ರಕರಣದಲ್ಲಿ ಮಾತ್ರ ಜರುಗಿದ್ದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. |

--3

| | ಪ್ರಶ್ನೆ | ಉತ್ತರ |
|---|---|---|
| ಈ. | ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; ಸಾರಿಗೆ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿ, ನಿರ್ಲಕ್ಷ್ಯ ವಹಿಸಿರುವುದು ಸರ್ಕಾರಕ್ಕೆ ತಿಳಿದಿಲ್ಲವೇ; (ವಿವರ ನೀಡುವುದು) | ಇಂತಹ ಅಪಘಾತಗಳು ಸಂಭವಿಸದಂತೆ ಸಾರಿಗೆ ಇಲಾಖೆಯಿಂದ ಕ್ರಮ ಸಂಖ್ಯೆ (ಆ) ರಲ್ಲಿ ನಮೂದಿಸಿರುವಂತೆ ಮುಂಜಾಗ್ರತಾ / ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br><br>ಪ್ರವರ್ತನ ಸಮಯದಲ್ಲಿ ಖಾಸಗಿ ಬಸ್ಸುಗಳಲ್ಲಿ ನಿಗಧಿಗಿಂತ ಹೆಚ್ಚಿನ ಸರಕು ಸಾಗಾಣಿಕೆ / ಅತಿಯಾದ ಲಗೇಜ್ / ಸ್ಫೋಟಕ ವಸ್ತುಗಳನ್ನು ಸಾಗಿಸುತ್ತಿರುವುದು ಕಂಡುಬಂದಲ್ಲಿ ಅಂತಹ ವಾಹನಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಂಡು ಪ್ರಕರಣಗಳನ್ನು ದಾಖಲಿಸಿ ದಂಡವನ್ನು ವಿಧಿಸಲಾಗುತ್ತಿದೆ. 2024-25 ನೇ ಸಾಲಿನಲ್ಲಿ ಇಂತಹ ಒಟ್ಟು 326 ಪ್ರಕರಣಗಳನ್ನು ದಾಖಲಿಸಿ ರೂ.15,18,211/- ಗಳ ದಂಡದ ಮೊತ್ತವನ್ನು ಸಂಗ್ರಹಿಸಲಾಗಿರುತ್ತದೆ.<br><br>ಖಾಸಗಿ ಮತ್ತು ಸರ್ಕಾರಿ ಬಸ್ಸುಗಳಲ್ಲಿ ಸರಕು ಸಾಗಾಣಿಕೆ / ಅತಿಯಾದ ಲಗೇಜ್ / ಸ್ಫೋಟಕ ವಸ್ತುಗಳನ್ನು ಸಾಗಣೆ ಸಂಬಂಧ ಸಾರಿಗೆ ಇಲಾಖೆ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿ, ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸಿರುವ ಯಾವುದೇ ಪ್ರಕರಣಗಳು ಕಂಡು ಬಂದಿರುವುದಿಲ್ಲ.<br><br>ಸಾರಿಗೆ ನಿಗಮದ ಬಸ್ಸುಗಳಲ್ಲಿ ನಿಷೇಧಿತ / ಸ್ಫೋಟಕ ವಸ್ತುಗಳಾದ ಪೆಟ್ರೋಲ್, ಡಿಸೇಲ್, ಕೆರೋಸಿನ್, ಗ್ಯಾಸೋಲಿನ್, ಸ್ಪಿರಿಟ್, ಟರಪೆಂಟೈನ್, ಆಸಿಡ್, ಸಲ್ಫರ್, ಕೊಲ್ಲಾರ್, ಗನ್ ಪೌಡರ್, ಪಟಾಕಿ / ಸಿಡಿ ಮದ್ದುಗಳು ಗ್ಯಾಸ್ ಸಿಲಿಂಡರ್ ಬ್ಯಾಟರಿಗಳು, ಕಲ್ಲಿದ್ದಲು ಪ್ಯಾಕ್ ಮಾಡದ ಹತ್ತಿ, ಪ್ಯಾಕ್ ಮಾಡದ ಒಣಗಿದ ಎಲೆಗಳು, ಗನ್ನುಗಳು, ಕರ್ಪೂರ ಇತ್ಯಾದಿ ಸುಲಭ ಹೊತ್ತಿಕೊಳ್ಳುವ ಪದಾರ್ಥಗಳು ಮತ್ತು ಕಾನೂನಿನ ಪ್ರಕಾರ ನಿಷೇಧಿಸಲ್ಪಟ್ಟ ಮತ್ತು ಇತರೇ ಹಾನಿಕಾರಕ ವಸ್ತುಗಳನ್ನು ಸಾಗಿಸದಂತೆ ಸುತ್ತೋಲೆ ಹೊರಡಿಸಲಾಗಿದ್ದು, ನಿಗಮದ ಚಾಲನಾ ಸಿಬ್ಬಂದಿಗಳಿಗೆ ಈ ಸಂಬಂಧ ಕಟ್ಟುನಿಟ್ಟಿನ ಆದೇಶ ನೀಡಿ ಕ್ರಮ ವಹಿಸಲಾಗಿರುತ್ತದೆ. |
| ಉ. | ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ ನ್ಯೂನ್ಯತೆ ನಿರ್ಲಕ್ಷ್ಯ ಕಂಡು ಬಂದರೂ ಸಹ, ಅಸಡ್ಡೆ ತೋರಿರುವ ಎಷ್ಟು ಸಾರಿಗೆ ಅಧಿಕಾರಿಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಾಗಿದೆ? | ಇದುವರೆಗೆ ಅಂತಹ ಪ್ರಕರಣಗಳು ಇರುವುದಿಲ್ಲ ಹಾಗೂ ನಿರ್ಲಕ್ಷ್ಯ ತೋರಿಸುವ ಪ್ರಕರಣಗಳು ಕಂಡುಬಂದಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು. |

ಟಿಡಿ 82 ಟಿಡಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.